ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 18–09–2020

# ಪತ್ರಿಕಾ ಪ್ರಕಟಣೆ

## B S YEDIYURAPPA CALLS ON PRIME MINISTER AND DISCUSSES ON VARIOUS ISSUES PERTAINING TO DEVELOPMENT

NEW DELHI, SEPTEMBER 18 (KARNATAKA INFORMATION) :

The Karnataka Chief Minister Mr B S Yediyurappa called on the Prime Minister Mr Narendra Modi in New Delhi this morning and discussed various developmental issues pertaining to the State.

The meeting, which lasted for 15 minutes at the Parliament House, between the two leaders had many appeals, pleas and requests.

The Chief Minister appealed to the Prime Minister to expedite the release of funds from National Disaster Response Fund. The Chief Minister made a plea to revise the items and norms of assistance from State Disaster Response Fund or National Disaster Response Fund for the current year itself to ensure timely and adequate financial assistance to the distressed people. He also urged the Prime Minister to declare Upper Krishna Project Stage-III and Upper Bhadra Project as National Projects. He also requested the Prime Minister to take necessary action for early approvals and clearances for irrigation and drinking water projects including Mekedatu and Kalasa Banduri Nala to utilise the precious water resources allocated to the State.

Mr Yediyurappa extended a warm invitation to Mr Narendra Modi to inaugurate Bengaluru Tech Summit on November 19 on a virtual mode.

**CHIEF MINISTER CALLS ON GAJENDRA SINGH SHEKHAWAT : URGES UNION GOVERNMENT TO DECLARE UPPER KRISHNA PROJECT-III AND UPPER BHADRA PROJECT AS NATIONAL PROJECTS**

**NEW DELHI, SEPTEMBER 18 ( KARNATAKA INFORMATION ) :**

The Chief Minister of Karnataka Mr B. S. Yediyurappa called on the Union Minister for Jal Shakti Mr Gajendra Singh Shekhawat at Shram Shakti Bhawan in New Delhi on Friday and urged the Union Government to declare Upper Krishna Project Stage-III and Upper Bhadra Project as National Projects.

The Chief Minister also requested for early approvals and clearances for irrigation and drinking water projects including Mekedatu and Kalasa Banduri Nala to utilise the precious water resources allocated to the State.

**CHIEF MINISTER CALLS ON PRAKASH JAVADEKAR REQUESTS FOR GRANT OF TERMS OF REFERENCE FOR MEKEDATU PROJECT**

**NEW DELHI, SEPTEMBER 18 ( KARNATAKA INFORMATION ) :**

**The Chief Minister of Karnataka Mr B. S. Yediyurappa called on the Union Minister for Information and Broadcasting, Environment, Forests and Climate Change, Heavy Industries and Public Enterprises Mr Prakash Javadekar at the Parliament House in New Delhi on Friday morning and requested to direct the concerned authorities in the Ministry of Environment and Forests to grant the Terms of Reference for Mekedatu Project. The Chief Minister also sought first stage forest clearance for Kalasa and Banduri Nala Projects in the State.**

**CHIEF MINISTER CALLS ON DHARMENDRA PRADHAN AND REQUESTS TO EXPEDITE THE PROCESS OF DISINVESTMENT OF V I S L**

**NEW DELHI, SEPTEMBER 18 ( KARNATAKA INFORMATION ) :**

**The Chief Minister of Karnataka Mr B. S. Yediyurappa called on the Union Minister for Petroleum,National Gas and Steel Mr Dharmendra Pradhan at Udyog Bhawan in New Delhi on Friday afternoon and requested to expedite the process of disinvestment of the Visvesvaraya Iron and Steel Limited.**

***********

**CHIEF MINISTER CALLS ON HARDEEP SINGH PURI REQUESTS RELEASE OF PERFORMANCE GRANTS FOR URBAN LOCAL BODIES.**

**NEW DELHI, SEPTEMBER 18 ( KARNATAKA INFORMATION ) :**

**The Chief Minister of Karnataka Mr B. S. Yediyurappa called on the Union Minister forCivil Aviation, Housing and Urban AffairsMr Hardeep Singh Puriat Nirman Bhavan in New Delhi on Fridayevening and requested to releaseRs 29520 Lakh for Performance Grants for Urban Local Bodies. He also sought for the inclusion of Ballari, Kalaburagi, Mysuru and Vijayapura City Corporations under the Smart City Programme.**

**Mr Yediyurappasought release of balance amount of Rs 24775 Lakh under Non-Million Plus Cities and also the first instalment of basic grant of Rs 27900 Lakh under Million Plus Cities.**

**The Chief Minister appealed to the Union Minister that the Concessional Fee, which has already accrued to Airports Authority of India and due from Bengaluru International Airport Limited be utilised for meeting the cost of additional land acquisition for the expansion of existing AAI Airports at Belagavi, Kalaburagi and Mangaluru in general and Mysuru Airport in particular.**

***********

**DPM : JG**

## ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಕುರಿತು ಚರ್ಚಿಸಲು ಪ್ರಧಾನಿ, ಕೇಂದ್ರ ಸಚಿವರ ಜೊತೆಗೆ ಭೇಟಿ : ಬಿ ಎಸ್‌ಯಡಿಯೂರಪ್ಪ

**ನವದೆಹಲಿ, ಸೆಪ್ಟೆಂಬರ್ 18 ( ಕರ್ನಾಟಕ ವಾರ್ತೆ ) :**

ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಕುರಿತು ಚರ್ಚಿಸಲು ತಾವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರದ ಹಲವು ಸಚಿವರನ್ನು ಭೇಟಿ ಮಾಡುತ್ತಿರುವುದಾಗಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು ಇಲ್ಲಿ ಇಂದು ತಿಳಿಸಿದರು.

ರಾಷ್ಟ್ರದ ರಾಜಧಾನಿಯಲ್ಲಿ 120 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಾಜ್ಯದ ರಾಯಭಾರಿ ಕಚೇರಿ ಎಂದೇ ಬಣ್ಣಿಸಲಾಗುವ ಕರ್ನಾಟಕ ಭವನ–1 " ಕಾವೇರಿ "ಕಟ್ಟಡದ ಪುನನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಎರಡು ತಳ ಮಹಡಿಗಳೂ, ನೆಲ ಮಹಡಿ ಹಾಗೂ ಆರು ಮಹಡಿ ಒಳಗೊಂಡಂತೆ ಒಟ್ಟು ಒಂಭತ್ತು ಮಹಡಿಗಳ ಈ ಕಟ್ಟಡವನ್ನುರ್ಮಾಣಕ್ಕೆಮೆ : ಬಾಲಾಜಿ ಕೃಪಾ ಪ್ರಾಜೆಕ್ಸ್‌ಪ್ರೈವೇಟ್ ಲಿಮಿಟೆಡ್‌ಅವರಿಗೆ ವಹಿಸಿದ್ದು, ಮುಂದಿನ 24 ತಿಂಗಳಲ್ಲಿ ಕಟ್ಟಡದ ಕಾಮಗಾರಿಗಳು ಪೂರ್ಣಗೊಳ್ಳಲಿವೆ ಎಂದರು.

ಪ್ರತಿಪಕ್ಷ ನಾಯಕರ ಆರೋಪ ತಳ್ಳಿಹಾಕಿದ ಮುಖ್ಯಮಂತ್ರಿ

ತಮ್ಮ ಪುತ್ರ ಬಿ ವೈ ವಿಜಯೇಂದ್ರ ಅವರನ್ನು ಸೂಪರ್ ಸಿ ಎಂ ಎಂದು ಬಣ್ಣಿಸಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಆರೋಪವನ್ನು ತಳ್ಳಿ ಹಾಕಿದ ಮುಖ್ಯಮಂತ್ರಿ, ವಿಜಯೇಂದ್ರ ಅವರು ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದಲ್ಲಿ ಉಪಾಧ್ಯಕ್ಷರಾಗಿ ರಾಜ್ಯದಲ್ಲಿ ಪಕ್ಷವನ್ನು ಸಂಘಟಿಸುವಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ಹೊರತು, ರಾಜ್ಯಸರ್ಕಾರದ ಯಾವುದೇ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುತಿಲ್ಲ ಎಂದು ಸ್ಪಷ್ಟಪಡಿಸಿದರು.

ಊಹಾಪೋಹ ಬೇಡ !

ಜಾತ್ಯಾತೀತ ಜನತಾ ದಳದ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್ ಡಿ ಕುಮಾರಸ್ವಾಮಿ ಹಾಗೂ ತಮ್ಮ ನಡುವಿನ ಇತ್ತೀಚಿನ ಭೇಟಿ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ, ಕುಮಾರಸ್ವಾಮಿ ಅವರು ಪ್ರತಿಪಕ್ಷದ ನಾಯಕರಲ್ಲೊಬ್ಬರು. ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲು ಆಗಮಿಸಿದ್ದರು. ಇಂತಹ ವಿಷಯಗಳಲ್ಲಿ ಅನಗತ್ಯ ಊಹಾಪೋಹ ಬೇಡ ಎಂದು ಉತ್ತರಿಸಿದರು.

" ಕಾವೇರಿ "ಯ ಹಿನ್ನೆಲೆ !

ನವದೆಹಲಿಯ ಚಾಣಕ್ಯಪುರಿಯಲ್ಲಿರುವ ಕೌಟಿಲ್ಯ ಮಾರ್ಗದ ಸಂಖ್ಯೆ : 10 ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದವನಹಳ್ಳಿ ನಿಜಲಿಂಗಪ್ಪ ಅವರ ಪರಿಕಲ್ಪನೆಯಲ್ಲಿ ರಾಜ್ಯದಗಣ್ಯಾತಿಗಣ್ಯರ ವಾಸ್ತವ್ಯಕ್ಕೆ ಎಂದೇ ಕರ್ನಾಟಕ ಭವನ ಕಟ್ಟಡವು 1967 ರಲ್ಲಿ ನಿರ್ಮಾಣಗೊಂಡಿತ್ತು. ಐವತ್ತು ವರ್ಷಗಳಿಗೂ ಹೆಚ್ಚು ಕಾಲದ ಈ ಕಟ್ಟಡದಲ್ಲಿ

ಕಾಲಕಾಲಕ್ಕೆ ಹಲವು ಮಾರ್ಪಾಡುಗಳನ್ನು ಮಾಡಲಾಗಿದೆ. ಹವಾಮಾನ ವೈಪರೀತ್ಯಗಳಿಂದ ಕಟ್ಟಡವು ಶಿಥಿಲಗೊಳ್ಳುತ್ತಿರುವುದನ್ನು ಪರಿವೀಕ್ಷಿಸಿ ಹಳೆಯ ಕಟ್ಟಡವನ್ನು ಕೆಡವಿ, ಅದೇ ಸ್ಥಳದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸುವುದು ಸೂಕ್ತ ಎಂದು2018 ರ ಫೆಬ್ರವರಿ 1 ರಂದು ಮೆ: ಸಿವಿಲ್ ಏಡ್‌ಟೆಕ್ನೋಕ್ಲಿನಿಕ್‌ತಾಂತ್ರಿಕ ಸಂಸ್ಥೆ ನೀಡಿದ ತಾಂತ್ರಿಕ ಶಿಫಾರಸ್ಸನ್ನು ಅಂಗೀಕರಿಸಿದ ರಾಜ್ಯ ಸರ್ಕಾರ ಕಟ್ಟಡ ಪುನನಿರ್ಮಾಣ ಕಾಮಗಾರಿಗಳಿಗೆ 87 ಕೋಟಿರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ 81 ಕೋಟಿರೂ. ತಾಂತ್ರಿಕ ಮಂಜೂರಾತಿ ನೀಡಿದೆ. ಕಟ್ಟಡದ ನಿರ್ಮಾಣಕ್ಕೆ ಮೆ : ಬಾಲಾಜಿ ಕೃಪಾ ಪ್ರಾಜೆಕ್ಸ್‌ಪ್ರೈವೇಟ್ ಲಿಮಿಟೆಡ್ ಆಯ್ಕೆಯಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ ಮತ್ತೆ ಮೇಳೈಸಲಿರುವ ಕಾವೇರಿ ಕಟ್ಟಡವು ಕೌಟಿಲ್ಯ ಮಾರ್ಗದ ಹೆಗ್ಗುರುತಾಗಿ ಮತ್ತೆ ಕಂಗೊಳಿಸಲಿದೆ.

ಉದ್ದೇಶಿತ ಕಟ್ಟಡದ ನೀಲನಕ್ಷೆ ಹಾಗೂ ಹಾಲಿ ಕಟ್ಟದ ಸ್ಥಳ ಸಮೀಕ್ಷೆ ಮಾಡಿ, ಕರ್ನಾಟಕ ಭವನದ ವಿವಿಧ ಕಚೇರಿಗಳಿಗೆ ನಿಗದಿಪಡಿಸಿದ ವಿಸ್ತೀರ್ಣವನ್ನು ಅವಶ್ಯಕತೆಗೆತಕ್ಕಂತೆ ಸೀಮಿತಗೊಳಿಸಲು ಹಾಗೂ ಪ್ರಸ್ತುತ ಕರ್ನಾಟಕ ಭವನಕ್ಕೆ ಹೊಂದಿಕೊಂಡಿರುವ ಅನೆಕ್ಸ್ ಕಟ್ಟಡದಲ್ಲಿರುವ ಐಷಾರಾಮಿ ಕೊಠಡಿಗಳನ್ನು ಉಪಯೋಗಿಸಲು ಹಾಗೂ ಒಂದು ಹೆಚ್ಚುವರಿ ಐಷಾರಾಮಿ ಕೊಠಡಿಯ ನಿರ್ಮಾಣವನ್ನು ಕೈಬಿಡಲು ಮುಖ್ಯಮಂತ್ರಿಯವರು ಸೂಚಿಸಿದ ಹಿನ್ನೆಲೆಯಲ್ಲಿಗಣ್ಯಾತಿ ಗಣ್ಯರ ಐಷಾರಾಮಿ ಕೊಠಡಿಗಳ ಸಂಖ್ಯೆ ನಾಲ್ಕರಿಂದ ಎರಡಕ್ಕೆ ಇಳಿಕೆಯಾಗಿದೆ.

ಗಣ್ಯರನ್ನು ಭೇಟಿ ಮಾಡಲು ಆಗಮಿಸುವ ಸಂದರ್ಶಕರಿಂದ, ಗಣ್ಯರ ಖಾಸಗೀತನಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಲು ಪ್ರತಿ ಐಷಾರಾಮಿಕೊಠಡಿಯಲ್ಲೂ ಒಂದು ಹೆಚ್ಚಿನ ಶೌಚಾಲಯವನ್ನು ನಿರ್ಮಿಸಲು ಯೋಜಿಸಲಾಗಿದೆ. ಅದರಂತೆ, ಮಾರ್ಪಡಿತ ಅಂದಾಜು ಪಟ್ಟಿಯ ಮೊತ್ತ 120 ಕೋಟಿರೂ ಗಳಿಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ದೊರೆತಿದೆ.

ಕರ್ನಾಟಕ ಭವನದಲ್ಲಿ ಕಚೇರಿಗಳ ಉಪಯೋಗಕ್ಕಾಗಿ ನಿಗದಿಪಡಿಸಿದ ಕಚೇರಿ ವಿಸ್ತೀರ್ಣವನ್ನು ಮಿತಗೊಳಿಸಿ, ಈ ಸ್ಥಳವನ್ನು ಬಳಸಿಕೊಂಡು ಗಣ್ಯರ ಐಷಾರಾಮಿ ಕೊಠಡಿಗಳ ಸಂಖ್ಯೆಯನ್ನು 14 ರಿಂದ 31 ಕ್ಕೆ ಹಾಗೂ ಗಣ್ಯರ ಕೊಠಡಿಗಳ ಸಂಖ್ಯೆಯನ್ನು 12 ರಿಂದ 15 ಕ್ಕೆ, ಒಟ್ಟಾರೆ ಗಣ್ಯಾತಿಗಣ್ಯರ ಕೊಠಡಿಗಳನ್ನು 30 ರಿಂದ 48 ಕ್ಕೆ ಹೆಚ್ಚಿಸಲಾಗಿದೆ.

" ಕಾವೇರಿ " ಯಲ್ಲಿ ಏನೇನಿದೆ ?

ಕರ್ನಾಟಕ ಭವನ–1 " ಕಾವೇರಿ "ಕಟ್ಟಡದ ಕೆಳತಳ ( ಲೋವರ್ ಬೇಸ್‌ಮೆಂಟ್ ) ಮಹಡಿ ಹಾಗೂ ಮೇಲ್ತಳ ( ಅಪ್ಪರ್ ಬೇಸ್‌ಮೆಂಟ್ ) ಮಹಡಿಯಲ್ಲಿ ತಲಾ 2335 ಚದುರ ಮೀಟರ್ ಪ್ರದೇಶವಿದೆ. ಕೆಳತಳ ಮಹಡಿಯಲ್ಲಿ ನಾಲ್ಕು ಚಕ್ರಗಳ 151 ವಾಹನಗಳು ಹಾಗೂ 107 ದ್ವಿ–ಚಕ್ರ ವಾಹನಗಳ ನಿಲುಗಡೆಗೆ ಅವಕಾಶವಿರುತ್ತದೆ. ಮೇಲ್ತಳ ಮಹಡಿಯಲ್ಲಿ ವಾಹನ ಚಾಲಕರ ಕೊಠಡಿ, ಭದ್ರತಾ ಸಿಬ್ಬಂದಿಯ ವಿಶ್ರಾಂತಿ ಕೊಠಡಿ, ಬಟ್ಟೆಶುಚಿಗೊಳಿಸಿ ಇಸ್ತ್ರಿ ಮಾಡುವ" ಲಾಂಡ್ರಿ " ಕೂಡಾ ಇರುತ್ತದೆ.

ಅಲ್ಲದೆ, ಇದೇ ಕಟ್ಟಡದಲ್ಲಿ 1030 ಚದುರ ಮೀಟರ್ ಪ್ರದೇಶದ ನೆಲ ಮಹಡಿ ಮಾತ್ರವಲ್ಲದೆ, ಅದೇ ವಿಸ್ತೀರ್ಣದ ಆರು ಮಹಡಿಗಳು ಇರುತ್ತವೆ. ನೆಲಮಹಡಿಯಲ್ಲಿ ಸ್ವಾಗತ ಮತ್ತು ನಿರೀಕ್ಷಣಾಕೊಠಡಿ, ವೀಡಿಯೋ ಸಮ್ಮೇಳನ ಕೊಠಡಿ, ಅಡುಗೆ ವಸ್ತುಗಳ ಉಗ್ರಾಣ( ಪ್ಯಾಂಟ್ರಿ ), ಗಣ್ಯಾತಿಗಣ್ಯರ ವಿಶ್ರಾಂತಿಕೊಠಡಿ, ಭೋಜನಾಲಯ, ಸಭಾಕೊಠಡಿ, ಶ್ರವ್ಯ-ದೃಶ್ಯಕೊಠಡಿ, ಚರ್ಚಾಕೊಠಡಿ, ಸಮೃದ್ಧ ಭೋಜನಾಲಯ ಹಾಗೂ ಶೌಚಾಲಯಗಳಿರುತ್ತವೆ.

ಮೊದಲ ಮಹಡಿಯಲ್ಲಿ ಸಮನ್ವಯ ಶಾಖೆ, ಭದ್ರತಾಕೊಠಡಿ, ವಾಸ್ತವ್ಯ ಮತ್ತುಉಗ್ರಾಣ ವಿಭಾಗದ ವ್ಯವಸ್ಥಾಪಕರ ಕೊಠಡಿ, ಸಹಾಯಕಕಾರ್ಯಪಲಕ ಅಭಿಯಂತರರ ಕೊಠಡಿ, ಲೆಕ್ಕಪತ್ರ ವಿಭಾಗ ಮತ್ತು ಕೊಠಡಿ, ಗಣಕ ನಿಯಂತ್ರಣ ಕೊಠಡಿ, ಆಡಳಿತ ವಿಭಾಗ, ಶಿಷ್ಟಾಚಾರ ಕಚೇರಿ, ತಾಂತ್ರಿಕ ವಿಭಾಗ, ವೈದ್ಯಕೀಯ ಸೇವಾ ಕೊಠಡಿ ಹಾಗೂ ಅಡುಗೆ ವಸ್ತುಗಳ ಉಗ್ರಾಣ ( ಪ್ಯಾಂಟ್ರಿ ) ಗೆ ಅವಕಾಶ ಕಲ್ಪಿಸಲಾಗಿದೆ.

ಎರಡನೇ ಮಹಡಿಯಲ್ಲಿ ನಿವಾಸಿ ಆಯುಕ್ತರು, ಅಪರ ನಿವಾಸಿ ಆಯುಕ್ತರು, ಮನೆ ವಾರ್ತೆ ವಿಭಾಗದ ಉಪ ನಿವಾಸಿ ಆಯುಕ್ತರು ಮತ್ತು ಸಾರ್ವಜನಿಕ ಸಂಪರ್ಕವಿಭಾಗದ ಉಪ ನಿವಾಸಿ ಆಯುಕ್ತರು, ಸಹಾಯಕ ನಿವಾಸಿ ಆಯುಕ್ತರು ಹಾಗೂ ಬೆಂಬಲಿತ ಸಿಬ್ಬಂದಿಯ ಕಚೇರಿಗಳು ಇರುತ್ತವೆ. ಅಧಿಕಾರಿಗಳ ವಿಶ್ರಾಂತಿ ಗೃಹ, ಅಧಿಕಾರಿಗಳ ಭೋಜನಾಲಯ, ಮನರಂಜನಾ ತಾಣ ಹಾಗೂ ಅಡುಗೆ ವಸ್ತುಗಳ ಉಗ್ರಾಣ( ಪ್ಯಾಂಟ್ರಿ ) ಅವಕಾಶ ಕಲ್ಪಿಸಲು ಯೋಜಿಸಲಾಗಿದೆ.

ಮೂರನೇ ಮಹಡಿಯಲ್ಲಿ ಮುಖ್ಯ ನ್ಯಾಯಮೂರ್ತಿಗಳ ಕೊಠಡಿ, ಕಾನೂನು ಕೋಶ ಮತ್ತು ಸಂಸದರಕೋಶದ ಕಚೇರಿಗಳು, ವಿಶೇಷ ಮತ್ತು ಅಪರ ಪ್ರತಿನಿಧಿಗಳ ಕಚೇರಿಗಳು ಹಾಗೂ ಆಪ್ತ ಕಾರ್ಯದರ್ಶಿಗಳ ಕೊಠಡಿ, ಕಚೇರಿ ವಿಸ್ತೀರ್ಣ, ಗ್ರಂಥಾಲಯ, ಅತಿಥಿ ಗೃಹ, ವ್ಯಾಯಾಮ ಶಾಲೆ ಹಾಗೂ ಅಡುಗೆ ವಸ್ತುಗಳ ಉಗ್ರಾಣ ( ಪ್ಯಾಂಟ್ರಿ ) ಕ್ಕೆ ವಿನ್ಯಾಸ ರೂಪಿಸಲಾಗಿದೆ.

ನಾಲ್ಕನೇ ಮಹಡಿಯಲ್ಲಿ ಗಣ್ಯಾತಿಗಣ್ಯರ ಕೊಠಡಿಗಳು, ಆರುಐಷಾರಾಮಿ ಕೊಠಡಿಗಳು, ಯೋಗಕೇಂದ್ರ, ವ್ಯಾಯಾಮ ಶಾಲೆ ಹಾಗೂ ಅಡುಗೆ ವಸ್ತುಗಳ ಉಗ್ರಾಣ( ಪ್ಯಾಂಟ್ರಿ ) ಇರುತ್ತವೆ. ಐದನೇ ಮಹಡಿಯಲ್ಲಿ ಗಣ್ಯಾತಿಗಣ್ಯರ ಕೊಠಡಿ ಮಲ್ಲಿಗೆ ಒಳಗೊಂಡಂತೆ ಮೂರು ಐಷಾರಾಮಿ ಕೊಠಡಿಗಳು ಇರಲಿವೆ. ಆರನೇ ಮಹಡಿಯಲ್ಲಿಗಣ್ಯಾತಿಗಣ್ಯರಕೊಠಡಿ ಸಂಪಿಗೆ ಒಳಗೊಂಡಂತೆ ಐರುಐಷಾರಾಮಿ ಕೊಠಡಿಗಳು ಇರುತ್ತವೆ.

ಲೋಕೋಪಯೋಗಿ ಮತ್ತು ಸಮಾಜಕಲ್ಯಾಣ ಖಾತೆಗಳ ಹೊತ್ತ ಉಪ ಮುಖ್ಯಮಂತ್ರಿ ಗೋವಿಂದ ಎಂ ಕಾರಜೋಳ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ ವಿ ಸದಾನಂದಗೌಡ, ಕೇಂದ್ರ ಸಂಸದೀಯ ವ್ಯಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವ ಪ್ರಹ್ಲಾದ ಜೋಶಿ, ಚಿಕ್ಕೋಡಿಯ ಸಂಸದ ಅಣ್ಣಾ ಸಾಹೇಬ್ ಜೊಲ್ಲೆ, ಬಾಗಲಕೋಟೆಯ ಸಂಸದ ಪಿ ಸಿ ಗದ್ದೀಗೌಡರ್, ಕಲಬುರಗಿಯ ಸಂಸದ ಉಮೇಶ್ ಜಾಧವ್, ಬೀದರ್‌ನ ಸಂಸದ ಭಗವಂತ ಖೂಬಾ, ಕೊಪ್ಪಳದ ಸಂಸದ ಕರಡಿ ಸಂಗಣ್ಣ, ಬಳ್ಳಾರಿಯ ವೈ ದೇವೇಂದ್ರಪ್ಪ, ದಾವಣಗೆರೆಯ ಸಂಸದ ಜಿ ಎಂ ಸಿದ್ದೇಶ್ವರ್, ಶಿವಮೊಗ್ಗದ ಸಂಸದ ಬಿ ವೈ ರಾಘವೇಂದ್ರ, ಚಿತ್ರದುರ್ಗ ಸಂಸದ ಎ ನಾರಾಯಣಸ್ವಾಮಿ, ತುಮಕೂರು ಸಂಸದ ಜಿ ಎಸ್ ಬಸವರಾಜು, ಮೈಸೂರು ಸಂಸದ ಪ್ರತಾಪ ಸಿಂಹ, ಬೆಂಗಳೂರು ಕೇಂದ್ರ ಕ್ಷೇತ್ರದಸಂಸದ ಪಿ ಸಿ ಮೋಹನ್,

**ಬೆಂಗಳೂರು ದಕ್ಷಿಣಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಮತ್ತು ಕೋಲಾರ ಸಂಸದ ಎಸ್ ಮುನಿಸ್ವಾಮಿ, ನವದೆಹಲಿಯಲ್ಲಿನ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ್ಅವರೂ ಒಳಗೊಂಡಂತೆ ಹಲವು ಗಣ್ಯರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.**

**ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ ಎಂ ವಿಜಯ್ ಭಾಸ್ಕರ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಡಾ ಇ ವಿ ರಮಣರೆಡ್ಡಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳೂ ಆದ ಕರ್ನಾಟಕ ಭವನದ ನಿವಾಸಿ ಆಯುಕ್ತ ಡಾ ಸಂದೀಪ್ದವೆ ಸೇರಿದಂತೆ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.**

***********

**ಡಿ ಪಿ ಎಂ**

# ಅಶೋಕ್ ಗಸ್ತಿ ನಿಧನಕ್ಕೆ ಡಿಸಿಎಂ ಸವದಿ ಕಂಬನಿ

**ನವದೆಹಲಿ, ಸೆಪ್ಟೆಂಬರ್ 18 ( ಕರ್ನಾಟಕ ವಾರ್ತೆ ) :**

ನನ್ನ ಆತ್ಮೀಯರೂ, ರಾಜ್ಯಸಭಾ ಸದಸ್ಯರು ಹಾಗೂ ಬಿಜೆಪಿಯ ಮುಖಂಡರಾಗಿದ್ದ ಅಶೋಕ ಗಸ್ತಿ ಅವರು ಅಕಾಲಿಕವಾಗಿ ನಿಧನರಾಗಿರುವುದು ನಮಗೆಲ್ಲಾ ಅತೀವ ದುಃಖ ತಂದಿದೆ **ಎಂದು** ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ **ಲಕ್ಷ್ಮಣ್ ಸವದಿ ತಿಳಿಸಿದ್ದಾರೆ.**

ಇತ್ತೀಚೆಗಷ್ಟೇ ಗಸ್ತಿ ಅವರು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆ ಆಗಿ ಹೊಸ ಭರವಸೆ ಮೂಡಿಸಿದ್ದರು. ಭವಿಷ್ಯದಲ್ಲಿ ಉತ್ತಮ ಸಂಸದೀಯ ಪಟುವಾಗಿ ಮಿಂಚುವ ಎಲ್ಲಾ ಲಕ್ಷಣಗಳು ಅವರಲ್ಲಿದ್ದವು. ಬಿಜೆಪಿಯಲ್ಲಿ ಅಚಲ ನಿಷ್ಠೆಯಿಂದ ದುಡಿಯುತ್ತ, ಸದಾ ತೆರೆಮರೆಯಲ್ಲೇ ಸೇವೆಗೈಯ್ಯುತ್ತಿದ್ದ ಅವರು ಅನೇಕ ಸಂದರ್ಭಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ನನ್ನ ಉಸ್ತುವಾರಿಯಲ್ಲಿರುವ ರಾಯಚೂರು ಜಿಲ್ಲೆಯ ಅನೇಕ ಅಭಿವೃದ್ಧಿ ಕೆಲಸಗಳಲ್ಲಿ ಜೊತೆಯಾಗಿದ್ದರು.

ಅತ್ಯಂತ ಸಾಮಾನ್ಯ ಕುಟುಂಬದಿಂದ ಸ್ವಂತ ಪರಿಶ್ರಮದ ಮೇಲೆ ರಾಜ್ಯಸಭೆಯವರೆಗೂ ಬಂದ ಗಸ್ತಿ ಅವರು, ಇನ್ನಷ್ಟು ಸಾಧನೆಗಳ ಹೊಸ್ತಿಲಿನಲ್ಲಿರುವಾಗಲೇ ಅವರ ಅಂತ್ಯವಾಗಿದ್ದು ವಿಧಿಯ ಕ್ರೌರ್ಯವೇ ಸರಿ. ಅವರ ಅಗಲುವಿಕೆ ನಿಜಕ್ಕೂ ತುಂಬಲಾರದ ನಷ್ಟವೇ ಸರಿ. ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಅವರ ಕುಟುಂಬಕ್ಕೆ ನನ್ನ ಸಾಂತ್ವನಗಳು ಎಂದು ಸಚಿವ **ಲಕ್ಷ್ಮಣ್ ಸವದಿ ತಿಳಿಸಿದ್ದಾರೆ.**

## ಅಶೋಕ್ ಗಸ್ತಿ ನಿಧನಕ್ಕೆ ಸಭಾಧ್ಯಕ್ಷರ ಸಂತಾಪ

ಬೆಂಗಳೂರು, ಸೆಪ್ಟೆಂಬರ್ 18 ( ಕರ್ನಾಟಕ ವಾರ್ತೆ ) :

ಅಶೋಕ್ ಗಸ್ತಿ ಅವರು ನನ್ನೊಡನೆ ಒಳ್ಳೆಯ ಒಡನಾಟ ಹೊಂದಿದ್ದು, ಉತ್ತಮ ಸ್ನೇಹಿತರಾಗಿದ್ದು ಅವರ ಅಕಾಲಿಕ ಅಗಲಿಕೆಯಿಂದ ನನ್ನ ಮನಸ್ಸಿಗೆ ನೋವನ್ನುಂಟುಮಾಡಿದೆ . ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ಈ ದು;ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಿಳಿಸಿದ್ದಾರೆ.

ಛಾಯಾಚಿತ್ರ ಶೀರ್ಷಿಕೆ :

ದಿನಾಂಕ 21-09-20 ರಂದು ಪ್ರಾರಂಭವಾಗುವ ಅಧಿವೇಶನದಲ್ಲಿ ಪಾಲ್ಗೊಳ್ಳಲು ಮಾನ್ಯ ಶಾಸಕರುಗಳು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಸಿಬ್ಬಂದಿಗಳಿಗೆ ಕೋವಿಡ್ -19 ಪರೀಕ್ಷೆಯನ್ನು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಇಂದು ಮಾಡಲಾಯಿತು.

## ಕಿಸಾನ್ ರೈಲು ಸೇವೆ ಇದೇ ಡಿಸೆಂಬರ್ 31 ರಿಂದ ಲಭ್ಯ

ಬೆಂಗಳೂರು, ಸೆಪ್ಟೆಂಬರ್ 18 ( ಕರ್ನಾಟಕ ವಾರ್ತೆ ) :

ಕಿಸನ್ ರೈಲು ಸೇವೆಯನ್ನು ದಕ್ಷಿಣ–ಪಶ್ಚಿಮ ರೈಲ್ವೇ ರವರಿಂದ ಕಲ್ಪಿಸಲಾಗಿದ್ದು, ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಬೆಂಗಳೂರಿನಿಂದ ಹೌರಾ, ಹೆಚ್.ನಿಜಾಮುದ್ದೀನ್, ದಿಮಾಪುರ್ ಹಾಗೂ ಗೌಹಾಟಿ ಪಟ್ಟಣಗಳಿಗೆ ಹಾಗೂ ಈ ಮಾರ್ಗಗಳಲ್ಲಿ ಬರುವ ಆಯ್ದ ಪಟ್ಟಣಗಳಿಗೆ ಸಾಗಾಣಿಕೆ ಮಾಡಬಹುದಾಗಿದೆ.

ರೈಲು ಸಂಖ್ಯೆ : 00615 ಕೆಎಸ್‌ಆರ್ ಬೆಂಗಳೂರಿನಿಂದ ಹೌರಾಗೆ ಪ್ರತಿ ಸೋಮವಾರ, ಬುಧವಾರ, ಶುಕ್ರವಾರ. 00621 ರೈಲು ಕೆಎಸ್‌ಆರ್ ಬೆಂಗಳೂರಿನಿಂದ ಹೆಚ್.ನಿಜಾಮುದ್ದೀನ್‌ಗೆ ಪ್ರತಿ ಬುಧವಾರ ಮತ್ತು ಶುಕ್ರವಾರ. 00619 ರೈಲು ಕೆಎಸ್‌ಆರ್ ಬೆಂಗಳೂರಿನಿಂದ ಗೌಹಾಟಿಗೆ ಪ್ರತಿ ಮಂಗಳವಾರ ಹೊರಡಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ: 9731666950, 973166651 ಹಾಗೂ 9731666957 ನ್ನು ಸಂಪರ್ಕಿಸಬಹುದು.

## ಯೋಜನಾ ಸಂಯೋಜಕರ ಹುದ್ದೆಗೆ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 18 ( ಕರ್ನಾಟಕ ವಾರ್ತೆ ) : ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆಯಡಿ ತಾತ್ಕಾಲಿಕವಾಗಿ 01 ಯೋಜನಾ ಸಂಯೋಜಕರ ಹುದ್ದೆಗೆ ಗೌರವ ಧನ ಆಧಾರದಲ್ಲಿ ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.**

**ಪದವಿ ಹೊಂದಿರುವ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆಯನ್ನು ಶಿಶು ಅಭಿವೃದ್ಧಿ ಯೋಜನೆ ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿ, ಬಿ.ಎಸ್.ಟಿ.ಎ.ಪಿ.ಸಿ.ಎಂ.ಎಸ್.ಕಟ್ಟಡ ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು-70 ಇಲ್ಲಿ ಕಚೇರಿ ವೇಳೆಯಲ್ಲಿ ಪಡೆದು ಸೆಪ್ಟೆಂಬರ್ 28 ರೊಳಗೆ ಅಗತ್ಯ ದಾಖಲಾತಿಗಳೊಂದಿಗೆ ಖುದ್ದಾಗಿ ಕಚೇರಿ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.**

# ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 18, (ಕರ್ನಾಟಕ ವಾರ್ತೆ) :**

**ಪರಿಶಿಷ್ಟ ಜಾತಿಯ ಅಲೆಮಾರಿ ಕೊರಮ-ಕೊರಚ (ಕುಳುವ) ಸಮುದಾಯದ ಮೇರು ವ್ಯಕ್ತಿಗಳಾದ (1) ಶ್ರೀ ಕುಶಲಾನಂದ ಯೋಗಿಯವರು, ಶರಣ ಪರಂಪರೆ 2)ಸುಪ್ರಸಿದ್ಧ ಶಹನಾಯಿ ವಾದಕ ಶ್ರೀ ಸನಾದಿ ಅಪ್ಪಣ್ಣರವರು 3)ಸ್ವಾತಂತ್ರ್ಯ ಹೋರಾಟಗಾರರ ಶ್ರೀ ವೀರ ಕನ್ನೇಶ್ವರ ರಾಮರವರು 4)ವಚನಗಾರ್ತಿ ಕಾಲಕಣ್ಣಿಕೆ ಕಾಮಮ್ಮನವರು/ಕೊರವಂಜಿ ರವರುಗಳ ಇತಿಹಾಸ, ಜೀವನ ಮತ್ತು ಹೋರಾಟದ ಚರಿತ್ರೆ ಮತ್ತು ವಸ್ತುನಿಷ್ಟವಾಗಿ ಅಧ್ಯಯನ/ ಸಂಶೋಧನಾ ವರದಿ 5) ಸಿಳ್ಳೇಕ್ಯಾತಾಸ್ ಸಮುದಾಯದ ಪರ್ಯಾಯ ಪದಗಳಾದ ಕಿಳ್ಳೇಕ್ಯಾತ, ಕಟಬು, ಕಟಬರ್, ಬುಂಡೆಬೆಸ್ತ, ಜಾಲಗಾರ್ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ. 6) ಕೊರಮ ಸಮುದಾಯದ ಪರ್ಯಾಯ ಪದಗಳಾದ ಎರ್‌ಕಲ, ಇರಕಲ, ಕೈಕಾಡಿ, ಕೊರಗಾರ್, ಕೊರಮ್‌ಶೆಟ್ಟಿ, ಕುಂಚಿ, ಕೊರ್ವಾರಿ, ಎರುಕುಲ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ.**

**ಮೇಲ್ಕಂಡ ಇತಿಹಾಸಕಾರರ ಹಾಗೂ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಕಾರ್ಯ ಕೈಗೊಳ್ಳಲು ಅರ್ಹ ಆಸಕ್ತರಿಂದ ಸಂಸ್ಥೆಯ ಷರತ್ತು ಹಾಗೂ ನಿಬಂಧನೆಗೊಳಪಟ್ಟು ಅರ್ಜಿ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳು ಹಾಗೂ ಅರ್ಜಿಯನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಬಂದು ಅಥವಾ ದೂರವಾಣಿಯ ಮೂಲಕ ಕರೆ ಮಾಡಿ ಇ-ಮೇಲ್ ಮೂಲಕ ಪಡೆದುಕೊಂಡು, ಷರತ್ತು ಮತ್ತು ನಿಭಂದನೆಗಳನ್ನು ಒಪ್ಪಿದ ನಂತರ ಆಸಕ್ತರು ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ರವರಿಗೆ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 30 ದಿವಸಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಬಂದ**

**ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಪ್ರತಿ ಸಂಶೋಧನೆಗೆ ರೂ. 3.50 ಲಕ್ಷಗಳನ್ನು ನಿಗಧಿಪಡಿಸಿದೆ. ದೂರವಾಣಿ ಸಂಖ್ಯೆ: 080–222048211, ಮೊಬೈಲ್ ಸಂ: 9740401417, 9341774015 ಎಂದು ಯೋಜನಾಧಿಕಾರಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ದೇಶದ ಮೊದಲ ಸ್ಥಾನದಲ್ಲಿ ಬೆಂಗಳೂರಿನ ಗಾಂಧಿಕೃಷಿ ವಿಜ್ಞಾನ ಕೇಂದ್ರದಲ್ಲಿರುವ ಜೀವವೈವಿಧ್ಯ ಪಾರಂಪರಿಕ ತಾಣ.

**ಬೆಂಗಳೂರು, ಸೆಪ್ಟೆಂಬರ್ 18, (ಕರ್ನಾಟಕ ವಾರ್ತೆ) :**

"ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 412 ಎಕರೆ ಪ್ರದೇಶದವನ್ನು ಪಾರಂಪರಿಕಜೀವವೈವಿಧ್ಯತಾಣ ಎಂದು 2010 ರಲ್ಲಿ ಗುರುತಿಸಿ ಘೋಷಿಸಲಾಗಿದೆ. ವಿನಾಶದ ಅಂಚಿನ ಸಸ್ಯವರ್ಗ ಸೇರಿ ಒಂದು ಲಕ್ಷ ಗಿಡಮರಗಳ ಅನನ್ಯಜೀವ ವೈವಿಧ್ಯ ಭಂಡಾರ ಇಲ್ಲಿದೆ. ಬೆಂಗಳೂರು ಮಹಾನಗರ ಜಿ.ಕೆ.ವಿ.ಕೆ.ಜೈವಿಕತಾಣ ನೀಡುವ ಆಮ್ಲಜನಕಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಈ ತಾಣದ ಸಂಪೂರ್ಣ ಸಂರಕ್ಷಣೆಗೆ ನಿರಂತರ ಕ್ರಮಕೈಗೊಂಡಿರುವ ಕೃಷಿವಿಶ್ವವಿದ್ಯಾಲಯ ಅಭಿನಂದನಾರ್ಹ" ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷಅನಂತ ಹೆಗಡೆ ಅಶೀಸರ ತಿಳಿಸಿದರು. ಅವರು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಜೀವವೈವಿಧ್ಯ ಪಾರಂಪರಿಕತಾಣಕ್ಕೆ ತಜ್ಞರು, ಅಧಿಕಾರಿಗಳ ತಂಡದಜೊತೆ 16.09.2020 ರಂದು ಮಧ್ಯಾಹ್ನ ಭೇಟಿ ನೀಡಿ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಜೀವವೈವಿಧ್ಯತಾಣ ಪರಿಸ್ಥಿತಿ ಕುರಿತ ಸಮಾಲೋಚನಾ ಸಭೆಯಲ್ಲಿ ಈ ಮೇಲಿನ ಅಭಿಪ್ರಾಯ ನೀಡಿದರು. ಕೃಷಿ ಜೀವವೈವಿಧ್ಯ ಅಧ್ಯಯನಕ್ಕೆ ಜಿ.ಕೆ.ವಿ.ಕೆ ತನ್ನ ಕೊಡುಗೆ ನೀಡಬೇಕುಎಂದರು.

ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ|ರಾಜೇಂದ್ರ ಪ್ರಸಾದ್ಅವರು ಕೃಷಿ ವಿ.ವಿ.ಕೈಗೊಂಡಿರುವ ಹಸಿರು ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಇಲ್ಲಿ ಜಲ ಸ್ವಾವಲಂಬನೆಗೆ, ಇಂಧನ ಸ್ವಾವಲಂಬನೆಗೆ ಮುಂದಾಗಿದ್ದೇವೆ. 1300 ಎಕರೆ ಪ್ರದೇಶ ವೃಕ್ಷಗಳಿಂದ ಕಂಗೊಳಿಸುವ ವಿಶೇಷ ಯೋಜನೆ ರೂಪಿಸಿದ್ದೇವೆ. ವಿದ್ಯಾರ್ಥಿವನ, ಜೈವಿಕಇಂಧನ ಪಾರ್ಕ, ಸಸ್ಯಶಾಸ್ತ್ರೀಯ ವನ ಇವೆ. ಗೋಬರ್‌ಗ್ಯಾಸ್, ಸೋಲಾರ್ ಪಂಪ್, ಸೋಲಾರ್ ವಿದ್ಯುತ್, ಕೆರೆಗಳ ನಿರ್ಮಾಣ ಮಾಡಿದ್ದೇವೆ ಎಂಬ ಮಾಹಿತಿ ನೀಡಿದರು.

"ರಾಜ್ಯದ ವಿನಾಶದ ಅಂಚಿನ ಜನಪ್ರಿಯ ಹಲಸಿನ ತಳಿಗಳ ಜೀನ್ ಬ್ಯಾಂಕ್, ನರ್ಸರಿ ಮಾಡಿದ್ದೇವೆ" ಎಂದು ಕೃಷಿ ವಿಜ್ಞಾನಿ ಡಾ|ಶ್ಯಾಮಲಮ್ಮ ತಿಳಿಸಿದರು. ಜೇನು ಸಂಶೋಧನೆಕುರಿತ ಮಾಹಿತಿಗಳನ್ನು ಡಾ|ಎನ್.ಎಸ್.ಭಟ್ ಮತ್ತು ಡಾ|ವಿಜಯಕುಮಾರ್ ತಿಳಿಸಿದರು. ಡಾ.ಷಡಾಕ್ಷರಿ, ಕೃಷಿ ಸಂಶೋಧನಾ ನಿರ್ದೇಶಕರು ಅರಣ್ಯ ವಿಭಾಗದ ಮುಖ್ಯಸ್ಥ ನಾಗರಾಜಯ್ಯ ರಿಜಿಸ್ಟ್ರಾರ್ ಡಾ. ಮಹಾಬಲೇಶ್ವರ್ ಪಾರಂಪರಿಕ ತಾಣಕ್ಷೇತ್ರ ಭೇಟಿಯಲ್ಲಿ ಹಸಿರು ಸಂವರ್ಧನೆಯ ಮಾಹಿತಿ ನೀಡಿದರು. ಜೀವವೈವಿಧ್ಯ ಮಂಡಳಿ ತಜ್ಞ ಸಲಹಾಕಾರರಾದ ಪ್ರೀತಂ, ಐಶ್ವರ್ಯ, ಪ್ರಸನ್ನ, ಅರಣ್ಯ ಅಧಿಕಾರಿ ಶ್ರೀ.ರವೀಂದ್ರ ಇತರರುಜೀವವೈವಿಧ್ಯ ಮಂಡಳಿತಂಡದಲ್ಲಿದ್ದರು.

**ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಜೀವವೈವಿಧ್ಯ ತಾಣ ನಿರ್ವಹಣೆ ಕುರಿತ ಸಭೆಯಲ್ಲಿ ಈ ಕೆಳಗಿನ ನಿರ್ಣಯ ಕೈಗೊಳ್ಳಲಾಯಿತು.**

ಜಿ.ಕೆ.ವಿ.ಕೆ. ಪಾರಂಪರಿಕ ತಾಣದ ಗಡಿ ಗುರಿತಿಸಲು ಅರಣ್ಯ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯ ಜಂಟಿ ಸಮೀಕ್ಷೆ ಕೈಗೊಳ್ಳಬೇಕು. ಜೀವವೈವಿಧ್ಯ ಪಾರಂಪರಿಕ ತಾಣಗಳ ಮಹತ್ವ, ನಿರ್ವಹಣೆ ಕುರಿತ ರಾಷ್ಟ್ರೀಯ ಸಮಾಲೋಚನಾ ಕಾರ್ಯಗಾವನ್ನು ಜಿ.ಕೆ.ವಿ.ಕೆಯಲ್ಲಿ ಜನವರಿ 2021 ರಲ್ಲಿ ನಡೆಸಬೇಕು. ಜಿ.ಕೆ.ವಿ.ಕೆ. ಜೀವವೈವಿಧ್ಯತಾಣ ನಿರ್ವಹಣಾ ಸಮಿತಿ ಪುನರ್‌ರಚಿಸಬೇಕು. ತಾಣಘೋಷಣೆ ನಂತರದ ಬೆಳವಣಿಗೆ–ಫಲಶೃತಿ ಬಗ್ಗೆ ಅಧ್ಯಯನ ನಡೆಸಬೇಕು. ಜೀವವೈವಿಧ್ಯ ತಾಣ ನಿರ್ವಹಣೆಗೆ ಮಂಡಳಿ ಅನುದಾನ ನೀಡಬೇಕು. ಕೃಷಿ, ತೋಟಗಾರಿಕಾ ಜೀವವೈವಿಧ್ಯ ಕುರಿತು ರಾಜ್ಯ ಮಟ್ಟದ ಸಮಾಲೋಚನಾ ಸಭೆ ನಡೆಸಬೇಕು.

**‘ಗಾಂಧಿ ಕೃಷಿ ವಿಜ್ಞಾನಕೇಂದ್ರ’ ಜೀವವೈವಿಧ್ಯ ಪಾರಂಪರಿಕತಾಣದ ವಿಶೇಷಗಳು :**

ಗಾಂಧಿ ಕೃಷಿ ವಿಜ್ಞಾನಕೇಂದ್ರವು ಬೆಂಗಳೂರು ನಗರಜಿಲ್ಲೆಯ, ಬೆಂಗಳೂರು ಉತ್ತರ ತಾಲ್ಲೂಕಿನ ಕೃಷಿ ವಿಜ್ಞಾನ ವಿಶ್ವವಿಧ್ಯಾಲಯ ಪ್ರದೇಶದ ಸಮೃದ್ಧ ಭಾಗವಗಿರತ್ತದೆ. ಸರ್ಕಾರದ ರಾಜ್ಯಪತ್ರ ಸಂಖ್ಯೆ: FEE 132 ENV 2009,ಬೆಂಗಳೂರು, ದಿನಾಂಕ: 02.09.2010ರ ಮೂಲಕ, ಕರ್ನಾಟಕ ರಾಜ್ಯದ್ಲ ಎರೆಡನೆಯ ಪಾರಂಪರಿಕತಾಣವಾಗಿ ಘೋಷಣೆಯಾಗಿರುತ್ತದೆ. ಈ ಪ್ರದೇಶವು 167 ಹೇಕ್ಟೇರ್ ವಿಸ್ತೀರಣವನ್ನು ಒಳಗೊಂಡಿದ್ದು, ನಗರ ಜೀವವೈವಿಧ್ಯತೆ (Urban Biodiversity) ತಾಣವೆಂದು ಪ್ರಸಿದ್ಧಿಯಾಗಿರುತ್ತದೆ. ಇಲ್ಲಿ ಕೃಷಿ ಜೀವವೈವಿಧ್ಯತೆಯ ಸಂರಕ್ಷಣೆ ಹಾಗೂ ಅಭಿವೃದ್ದಿಗೆ ಸಂಬಂಧಿತವಾಗಿ, ಜೈವಿಕತಂತ್ರಜ್ಞಾನ ಹಾಗೂ ಸಸ್ಯ ಸಂಶೋಧನಾ ಘಟಕಗಳ ಸ್ಥಾಪನೆಯಾಗಿರುತ್ತದೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರವು ನಗರದಲ್ಲಿ ಅತ್ಯಂತ ಹಸಿರಾದ ಪ್ರದೇಶವೆಂದು ಪರಿಗಣಿಸಲಾಗಿದ್ದು, ಸುಮಾರು 600 ಪ್ರಮುಖ ಔಷಧಿಯ ಸಸ್ಯಗಳ ಮತ್ತುಇತರೆ ಫಲ–ಪುಷ್ಪ ಸಸ್ಯಗಳ ವನವಾಗಿರುವುದಲ್ಲದೆ, ಕೃಷಿಗೆ ಸಂಬಂಧಿಸಿದ ಪ್ರಮುಖ ಸೂಕ್ಷ್ಮಾಣು ಜೀವಿಗಳಿಗೆ ಈ ಪ್ರದೇಶವು ಮುಖ್ಯ ನೆಲೆಯಾಗಿರುತ್ತದೆ. ಹಲವು ಪುರಾತನ ಕಾಲದ ಸಸ್ಯ ಸಂಕುಲಗಳ ಸಂಗ್ರಹಣೆಯೊಂದಿಗೆ, ಇತರೆ ವಿಶೇಷ ತಳಿಗಳ ಗಿಡ–ಮರಗಳನ್ನು ಬೆಳೆಸಲ್ಪಟ್ಟಿರುವ ಮಹತ್ಮ ಗಾಂದಿ ಸಸ್ಯಊಧ್ಯಾನವನ ಹಾಗೂ ಸಂಗ್ರಹಾಲಯವುತಾಣದಲ್ಲಿದೆ. ವಿಸ್ತಾರವಾದ ಹಸಿರಿನಿಂದ ಕೂಡಿರುವ ಈ ತಾಣ ಪ್ರದೇಶದಲ್ಲಿ – ಕಾಡು ಪಾಪ (*Loris lyddekerianus*), ಮುಂಗಸಿ (*Herpestesedwardsi*), ನರಿ (*Canisaureus*), ಕಾಡು ಬೆಕ್ಕು (*Felischaus*), ಕಾಡು ಹಂದಿ (*Sus scrofa*)ಇವುಗಳನ್ನೂಳಗೊಂಡಂತೆ ಸುಮಾರು 13 ಸಸ್ತನಿಗಳು, 10 ಜಾತಿಯ ಸರಿಸೃಪಗಳು, 165 ಜಾತಿಯ ಪಕ್ಷಿಗಳು, 96 ಚಿಟ್ಟೆ ತಳಿಗಳು, 172 ಜೇನು ಗೂಡುಗಳು ಪ್ರಾಕೃತಿಕವಾಗಿ ಲಭ್ಯವಿರುತ್ತದೆ. ಸರಿಸುಮಾರು 1,50,000ಕೀಟ ತಳಿಗಳನ್ನು ವೈಜ್ಞಾನಿಕ ಸಂಗ್ರಹಾಲಯದಲ್ಲಿ ಶೇಖರಿಸಲಾಗಿದೆ.

---

ಛಾಯಾಚಿತ್ರ ಶೀರ್ಷಿಕೆ )

ಕರ್ನಾಟಕ ಜೀವವೈವಿಧ್ಯ ಮಂಡಳಿ ಪಾರಂಪರಿಕ ತಾಣ ಭೇಟಿ, ಸಮಾಲೋಚನಾ ಸಭೆ, ಹಲಸಿನ ಪಾರಂಪರಿಕ ತಳಿಗಳ ಜರ್ಮ ಪ್ಲಾಸಂಗೆ ಭೇಟಿ

## ಸ್ಥಳೀಯ ಸಂಸ್ಥೆಗಳ ಚುನಾವಣೆ ಪ್ರಮಾಣಿತ ಕಾರ್ಯನಿರ್ವಹಣಾ ಪದ್ಧತಿ ಮಾರ್ಗಸೂಚಿ

**ಬೆಂಗಳೂರು, ಸೆಪ್ಟೆಂಬರ್ 18, (ಕರ್ನಾಟಕ ವಾರ್ತೆ) :** ಕೋವಿಡ್-19 ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ / ಉಪ ಚುನಾವಣೆ ನಡೆಸಲು ಅನುಸರಿಸಬೇಕಾದ ಪ್ರಾಮಾಣಿತ ಕಾರ್ಯ ನಿರ್ವಹಣಾ ಪದ್ಧತಿ ಮಾರ್ಗಸೂಚಿಯನ್ನು ರಚಿಸಲಾಗಿದೆ

ಗ್ರಾಪಂಚಾಯಿತಿಗಳ ಚುನಾವಣೆಯಲ್ಲಿ ಅಭ್ಯರ್ಥಿಗಳು ಗರಿಷ್ಠ 5 ಜನ ಬೆಂಬಲಿಗರೊಂದಿಗೆ ಸಾಮಾಜಿಕ ಅಂತರ ಕಾಯುಕೊಂಡು ಪ್ರಚಾರ ಮಾಡಬಹುದಾಗಿದೆ. ಕೋವಿಡ್ ಸೋಂಕಿತ ವ್ಯಕ್ತಿಗಳು ಮತ ಚಲಾಯಿಸಲು ಹಕ್ಕುಳ್ಳವರಾಗಿದ್ದು, ಇವರಿಗೆ ಅಂಚೆ ಮತಪತ್ರಗಳ ಮೂಲಕ ಮತಚಲಾಯಿಸಲು ಅವಕಾಶ ಕಲ್ಪಿಸಲಾಗುತ್ತದೆ.

ಚುನಾವಣಾ ಕಾರ್ಯದಲಿ ನಿರತರಾಗುವ ಎಲ್ಲಾ ಅಧಿಕಾರಿ ಸಿಬ್ಬಂದಿಯವರು ಅವಶ್ಯಕ ಸಾಮಗ್ರಿಗಳಾದ ಫೇಸ್ ಮಾಸ್ಕ್, ಸ್ಯಾನಿಟೈಸರ್, ಥರ್ಮಲ್ ಸ್ಕ್ಯಾನರ್ ಇತ್ಯಾದಿಗಳನ್ನು ಉಪಯೋಗಿಸಿಕೊಂಡು ಕೋವಿಡ್ ಮಾರ್ಗಸೂಚಿಯನ್ನು ಅನುಸರಿಸಿ ಚುನಾವಣೆ ನಡೆಸಲು ಅನುಕೂಲ ಕಲ್ಪಿಸಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ರಾಜ್ಯ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದತ್ತು ಸ್ವೀಕಾರ

**ಬೆಂಗಳೂರು, ಸೆಪ್ಟೆಂಬರ್ 18, (ಕರ್ನಾಟಕ ವಾರ್ತೆ) :**

ಮೈಸೂರು ಮೃಗಾಲಯದ "ಪ್ರಾಣಿಗಳ ಮತ್ತು ಸ್ವೀಕಾರ ಯೋಜನೆ" ಅಡಿಯಲ್ಲಿ ಈ ಕೆಳಕಂಡವರು ಮೈಸೂರು ಮೃಗಾಲಯದ ಪ್ರಾಣಿ ಪಕ್ಷಿಗಳನ್ನು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ದತ್ತು ಸ್ವೀಕಾರ ಮಾಡಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಬಿ.ಎನ್. ನಟರಾಜ್, ಮೈಸೂರು ನಕ್ಷತ್ರದ ಆಮೆ, ಸ್ನೇಹ ಜೆ. ಮೈಸೂರು ನವಿಲು, ಸೌರಬ್ ಪ್ರಮಾಣಿಕ್ ಮುಂಬೈ ಲವ್‌ಬರ್ಡ್, ಮೋಹನ ಕುಮಾರ ಮಂಡ್ಯ, ಕೆರೆಹಾವು, ವೈನವಿ ವಿನಯ್ ಮೈಸೂರು ಫ್ಲೆಮಿಂಗೋ, ಪ್ರವೀಣ್ ಎಸ್. ಮೈಸೂರು, ನಕ್ಷತ್ರದ ಆಮೆ, ಯಾಶಿಕ ಮೈಸೂರು ಬಿಳಿ ನವಿಲು, ಮಂಜುಳ ಸಿ ಮೈಸೂರು ನಾಲ್ಕು ಕೊಂಬಿನ ಶಂಕೆ, ಸಮನ ಮನಸ್ಕರು ಮೈಸೂರು, ರೈನ್ ಲೊರಿಕೀಟ್, ರೇಖಾ ಎಂ. ಮೈಸೂರು, ಜಿಂಕೆ, ಡಾ: ಪ್ರಶಾಂತ್ ಎಚ್.ಟಿ. ರಾಯಚೂರು ಚಿರತೆ ಚಿಕ್ಕು, ಜಗನ್ ಮೋಹನ್ ಎಚ್.ಡಿ. ಮೈಸೂರು ಕಾಳಿಂಗ ಸರ್ಪ, ಇನ್ನರ್ ವೀಲ್ ಕ್ಲಬ್ ಮೈಸೂರು ಸೌತ್ ಈಸ್ಟ್ ಲವ್‌ಬರ್ಡ್ (2), ಸಂಯುಕ್ತ ಲಯನ್ಸ್ ಕ್ಲಬ್ ಆಫ್ ಮೈಸೂರ್ ಅರಮನೆ ಸಿಟಿ ಕ್ಲಬ್, ಲವ್‌ಬರ್ಡ್, ಸೌಚಿಶೋನಶ್ರೇಯ ಬಿನ್. ಜೆ ಬಿನಗ. ಮಹೇಶ್ ಮೈಸೂರು ನವಿಲು, ಎಸ್.ಆರ್. ಸತೀಶ್ ಚಂದ್ರ ಮೈಸೂರು, ಬಿಳಿ ನವಿಲು, ಮೊಹಮ್ಮದ್ ಹಮ್ದಾನ್ ಮೈಸೂರು ಕಾಕಟೈಲ್.

# ಮಹಾರಾಷ್ಟ್ರಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್

**ಬೆಂಗಳೂರು, ಸೆಪ್ಟೆಂಬರ್ 18, (ಕರ್ನಾಟಕ ವಾರ್ತೆ) :**

ಕೋವಿಡ್-19 ಹಾಗೂ ಲಾಕ್‌ಡೌನ್ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಅಂತರರಾಜ್ಯ ಸಾರಿಗೆಗಳ ಕಾರ್ಯಾಚರಣೆಯನ್ನು ಸ್ಥಗಿತ ಗೊಳಿಸಿರುತ್ತದೆ. ಕೋವಿಡ್-19 ಲಾಕ್‌ಡೌನ್ ಸಡಿಲ ಗೊಂಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮಹಾರಾಷ್ಟ್ರ ರಾಜ್ಯಕ್ಕೆ ಬೆಂಗಳೂರು, ದಾವಣಗೆರೆ, ಮಂಗಳೂರು ಒಳಗೊಂಡಂತೆ ರಾಜ್ಯದ ವಿವಿಧ ಸ್ಥಳಗಳಿಂದ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುತ್ತಿದೆ. ಎಲ್ಲಾ ಪ್ರಯಾಣಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕಾಗಿರುತ್ತದೆ. ಮುಂಗಡ ಆಸನಗಳನ್ನು www.ksrtc.inವೆಬ್‌ಸೈಟ್‌ಮತ್ತು ನಿಗಮದ / ಫ್ರಾಂಚೈಸಿ ಕೌಂಟರ್‌ಗಳ ಮುಖಾಂತರ ಕಾಯ್ದಿರಿಸಿ ಕೊಳ್ಳಬಹುದಾಗಿದೆ. ಪ್ರಯಾಣಿಕರು ಸದರಿ ಸೌಲಭ್ಯದ ಸದುಪಯೋಗ ಪಡೆಯಲು ಪ್ರಕಟಣೆ ತಿಳಿಸಿದೆ.

# KSRTC will restart the operations to Maharashtra State

**NEW DELHI, SEPTEMBER 18 ( KARNATAKA INFORMATION ) :**

Karnataka State Road Transport Corporation had stopped operation of inter-state bus services due to Covid-19 and Lockdown. As lockdown has been relaxed, KSRTC will restart the operations to Maharashtra State. The services will be operated from Bengaluru, Davangere, Mangalore and various other places of Karnataka State keeping in view the density of passengers. It is mandatory for all passengers to wear mask. Passengers can book tickets in advance online at www.ksrtc.in or through KSRTC/Franchisee advance reservation counters for the above services. The passengers are requested to avail the above facilities.

# ವಿಧಾನಪರಿಷತ್ ಅಧಿವೇಶನಕ್ಕೆ ಸಕಲ ಸಿದ್ಧತೆ: ಕಾರ್ಯದರ್ಶಿ ಮಹಾಲಕ್ಷ್ಮಿ

ಬೆಂಗಳೂರು, ಸೆಪ್ಟಂಬರ್ 18 (ಕರ್ನಾಟಕ ವಾರ್ತೆ):

ಸೆಪ್ಟಂಬರ್ 21 ರಿಂದ 30 ರವರೆಗೆ ವಿಧಾನಸೌಧದಲ್ಲಿ ನಡೆಯಲಿರುವ ಕರ್ನಾಟಕ ವಿಧಾನ ಪರಿಷತ್‌ನ 141ನೇ ಅಧಿವೇಶನಕ್ಕೆ ಕೋವಿಡ್-19 ರನ್ವಯ ಮುಂಜಾಗ್ರತಾ ಕ್ರಮಗಳ ಜೊತೆಗೆ ಸದಸ್ಯರು ಅಧಿಕಾರಿ, ಸಿಬ್ಬಂದಿಗಳಿಗೆ ಮಾಸ್ಕ್, ಫೇಸ್ ಶೀಲ್ಡ್ ಹಾಗೂ ಸ್ಯಾನಿಟೈಸ್‌ಳನ್ನು ಒದಗಿಸಲಾಗುತ್ತದೆ ಎಂದು ವಿಧಾನ ಪರಿಷತ್ತಿನ ಕಾರ್ಯದರ್ಶಿಗಳಾದ ಕೆ.ಆರ್.ಮಹಾಲಕ್ಷ್ಮಿ ತಿಳಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಶಾಸಕರ ನಡುವೆ ಅಂತರ ಕಾಯ್ದುಕೊಳ್ಳಲು ಆಸನಗಳ ನಡುವೆ ಟ್ರಾನ್ಸ್‌ಪರೆಂಟ್ ಫೈಬರ್ ಶೀಟ್‌ನ್ನು ಅಳವಡಿಸಲಾಗಿದೆ. ಎಲ್ಲಾ ಇಲಾಖೆಗಳ ಹಿರಿಯ ಅಧಿಕಾರಿಗಳು, ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾಧ್ಯಮ ಗ್ಯಾಲರಿ, ಉಪಕಾರ್ಯದರ್ಶಿ, ಕೆಳಮಟ್ಟದ ಅಧಿಕಾರಿ, ನೌಕರರು ಹಾಗೂ ಮಾಧ್ಯಮದವರಿಗೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಆಸನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರಸ್ತುತ ಅಧಿವೇಶನದಲ್ಲಿ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂದರು.

ಈ ಬಾರಿ ಅಧಿವೇಶನಕ್ಕೆ ಹಾಜರಾಗುವ ಎಲ್ಲಾ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಮಾಧ್ಯಮದವರು ಕಡ್ಡಾಯವಾಗಿ ಅಧಿವೇಶನ ಆರಂಭವಾಗುವ 72 ಗಂಟೆಗೆ ಮುನ್ನ ಕರೋನ ತಪಾಸಣೆ ಮಾಡಿಸಿ ವರದಿ ಹಾಜರುಪಡಿಸಬೇಕು. ವಿಧಾನಸೌಧದಲ್ಲಿ ಈ ಪರೀಕ್ಷೆಗೆ ಉಚಿತ ವ್ಯವಸ್ಥೆ ಮಾಡಲಾಗಿದೆ. ಬೇರೆ ಕ್ಷೇತ್ರದಿಂದ ಬರುವವರು ಅಲ್ಲಿಯೇ RT-PCR ಪರೀಕ್ಷೆ ಮಾಡಿಸಿ ದೃಢೀಕರಣ ಪತ್ರ ತರಬೇಕು ಎಂದರು.

ಪ್ರತಿದಿನ ಪರಿಷತ್ತಿನ ಸಭಾಂಗಣ ಹಾಗೂ ಮೊಗಸಾಲೆಯನ್ನು ಸ್ಯಾನಿಟೈಸ್ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಬಾರಿ ಸದನದಲ್ಲಿ ಪ್ರಶ್ನೆಗಳು, ಉತ್ತರಗಳನ್ನು ಆದಷ್ಟು ಕಂಪ್ಯೂಟರ್ ಮೂಲಕವೇ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ. ಸಮಾಜಿಕ ಅಂತರ ಕಾಯ್ದುಕೊಂಡು ಸುರಕ್ಷಿತವಾಗಿ ಅಧಿವೇಶನ ನಡೆಸುವುದು ಮುಖ್ಯ ಎಂದರು.

ಅಧಿವೇಶನದ ಮೊದಲ ದಿನವಾದ ಸೆಪ್ಟಂಬರ್ 21 ರಂದು ಅಗಲಿದ ಗಣ್ಯರಿಗೆ ಸಂತಾಪ ಸೂಚಕ ಸಭೆ ನಡೆಯಲಿದೆ. ಈ ಬಾರಿ 1254 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ ಹಾಗೂ 20 ವಿಧೇಯಕಗಳು ಮಂಡನೆಯಾಗಲಿದೆ ಎಂದರು.

## ಸಚಿವ ಸಿ.ಟಿ.ರವಿ ಅವರಿಂದ ಆನ್‌ಲೈನ್ ಕಲಾಶಿಬಿರ  ಉದ್ಘಾಟನೆ

**ಬೆಂಗಳೂರು, ಸೆಪ್ಟಂಬರ್ 18(ಕರ್ನಾಟಕ ವಾರ್ತೆ):**

ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವ ಸಿ.ಟಿ. ರವಿ ರವರು ಕಾನ್ವಾಸ್ ಮೇಲೆ ರೇಖಾ ಚಿತ್ರವನ್ನು ಚಿತ್ರಿಸಿ ಕಲಾಶಿಬಿರವನ್ನು ಉದ್ಘಾಟಿಸಿದರು

ಕರ್ನಾಟಕ ಲಲಿತಾಕಲಾ ಅಕಾಡೆಮಿಯು ಕೋವಿಡ್-19 ಸಾಂಕ್ರಾಮಿಕ ಕಾರಣದಿಂದ ಸಾಮಾಜಿಕ ಅಂತರ ಕಾಪಾಡುವ ಹಿನ್ನೆಲೆಯಲ್ಲಿ ಆನ್‌ಲೈನ್ ಕಲಾಶಿಬಿರವನ್ನು ದಿನಾಂಕ 18-09-2020 ರಿಂದ 25-09-2020ರ ವರೆಗೆ, ರಾಜ್ಯದ 60 ಜನ ಕಲಾವಿದರನ್ನು ಏಕ ಕಾಲದಲ್ಲಿ ತಮ್ಮ ಸ್ಟುಡಿಯೋ ಹಾಗೂ ಮನೆಯಲ್ಲಿ ಕಲಾಕೃತಿಯನ್ನು ರಚಿಸಿ ಶಿಬಿರದಲ್ಲಿ ರಚನೆ ಮಾಡಿರುವ ಕಲಾಕೃತಿಗಳನ್ನು ಆನ್‌ಲೈನ್ ಮೂಲಕ ವೀಕ್ಷಿಸಬಹುದಾಗಿದೆ. ಇದು ಅಕಾಡೆಮಿಯ ಇತಿಹಾಸದಲ್ಲಿ ಒಂದು ವಿಶೇಶವಾದ ಕಾರ್ಯಕ್ರಮವಾಗಿದೆ.

ಕರ್ನಾಟಕ ಲಲಿತಾಕಲಾ ಅಕಾಡೆಮಿಯ ಅಧ್ಯಕ್ಷರಾದ ಮಹೇಂದ್ರ ಡಿ. ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತರಕ್ಷಣಾ ಕಾಯ್ದೆಯಡಿ ಕ್ರಮ

**ಬೆಂಗಳೂರು, ಸೆಪ್ಟಂಬರ್ 18(ಕರ್ನಾಟಕ ವಾರ್ತೆ):**

ಮೆ: ಲ್ಯಾನ್ಸರ್ ಫೈನಾನ್ಸ್ ಕಂಪನಿ ಪ್ರೈ.ಲಿ., ಮೈಸೂರು ರವರು ರಾಜ್ಯಾದಾದ್ಯಂತ ಹೊಂದಿದ ಶಾಖೆಗಳಲ್ಲಿ ಸಾರ್ವಜನಿರು ನಿಶ್ಚಿತ ಠೇವಣಿ (ಎಫ್.ಡಿ.)/ ರೆಕರಿಂಗ್ ಡಿಪಾಸಿಟ್ (ಆರ್.ಡಿ)/ಮಾಸಿಕ ವಂತಿಕೆ (ಮಾಸಿಕ ಚೀಟಿ ಹಣ) ಹಾಗೂ ಇತರೆ ರೂಪದಲ್ಲಿ ಠೇವಣಿಯಾಗಿ ಇಡಲಾಗಿದ್ದ ಹಣವನ್ನು ಸಕಾಲದಲ್ಲಿ ಹೂಡಿಕೆದಾರರಿಗೆ ಹಿಂತಿರುಗಿಸದ ಕಾರಣ ಸದರಿ ಸಂಸ್ಥೆ ಹಾಗೂ ಅದರ ಪದಾಧಿಕಾರಿಗಳ ವಿರುದ್ಧ ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ (ಇತರೆ) ದಾವೆಯನ್ನು ಹೂಡಲಾಗಿದ್ದು ಅವುಗಳು ವಿಚಾರಣೆ ಹಂತದಲ್ಲಿರುತ್ತದೆ.

ಮೇಲ್ಕಂಡ ಸಂಸ್ಥೆಯಲ್ಲಿ ಹೂಡಲಾಗಿರುವ ಠೇವಣಿಗೆ ಸಂಬಂಧಿಸಿದ ಅತ್ಯಾವಶ್ಯಕವಾದ ಮೂಲ ದಾಖಲೆಗಳನ್ನು ಹಾಗೂ ಸದರಿ ಸಂಸ್ಥೆಯವರು ಹೂಡಿಕೆದಾರರಿಗೆ ಭದ್ರತಾ ದೃಷ್ಠಿಯಿಂದ ನೀಡಿರುವ ಮುಖಬೆಲೆ ದಾಖಲೆಗಳ ವಿವರಗಳನ್ನು ಗೌರವಾನ್ವಿತ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುವುದರಿಂದ ದಿನಾಂಕ 21-09-2020 ರಿಂದ 29-10-2020 ಸಂಜೆ 5-00 ಗಂಟೆಯೊಳಗೆ ತಪ್ಪದೆ ಕಚೇರಿ ವೇಳೆಯಲ್ಲಿ (ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ) ಈ ಕಚೇರಿಗೆ ಖುದ್ದಾಗಿ ಠೇವಣಿದಾರರು ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಠೇವಣಿ ಹೂಡಿಕೆ ವಿವರ (ಆರ.ಡಿ./ಎಫ್.ಡಿ./ಮಾಸಿಕ ಚೀಟಿ ವಂತಿಕೆ) ಹೂಡಿಕೆಗೆ ಸಂಬಂಧಿಸಿದಂತೆ ಲ್ಯಾನ್ಸರ್ ಫೈನಾನ್ಸ್ ಕಂಪನಿ ಸಂಸ್ಥೆಯವರು ನೀಡಿರವ ಬಾಂಡ್/ಪಾಸ್ ಬುಕ್/ಇತ್ಯಾದಿ ಹಾಗೂ ಠೇವಣಿದಾರರು

ಹೂಡಿರುವ ಒಟ್ಟು ಮೊತ್ತ/ ಹಿಂಪಡೆದ ಮೊಬಲಗು (ಠೇವಣಿ ಹಣದಲ್ಲಿ/ ಬಡ್ಡಿ ರೂಪದಲ್ಲಿ) ಠೇವಣಿದಾರರಿಗೆ ಬರಬೇಕಾದ ಮೊತ್ತ ಹಾಗೂ ಇತರೆ ದಾಖಲೆಗಳನ್ನು ಅರ್ಜಿಯೊಡನೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಈ ಕಚೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಬರುವ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಠೇವಣಿಗೆ ಸಂಬಂಧಿಸಿದಂತೆ ಅಪೂರ್ಣ ಮಾಹಿತಿ ನೀಡಿರುವ ಅರ್ಜಿಗಳನ್ನು ಸಹ ಪರಿಗಣಿಸಲಾಗುವುದಿಲ್ಲ ಮತ್ತು ದಾಖಲೆಗಳಿಲ್ಲದ ಅರ್ಜಿಗಳನ್ನು ಸಹ ಪರಿಗಣಿಸಲಾಗುವುದಿಲ್ಲ ಹೆಚ್ಚಿನ ವಿವರಗಳಿಗೆ ಉಪವಿಭಾಗಾಧಿಕಾರಿಗಳು, ಮೈಸೂರು ವಿಭಾಗ ಹಾಗೂ ಸಕ್ಷಮ ಪ್ರಾಧಿಕಾರ ಕಾರ್ಯಾಲಯ ದೂರವಾಣಿ/ಫ್ಯಾಕ್ಸ್ ಸಂಖ್ಯೆ 0821–2422100,ಇ ಮೇಲ್ mysac1@yahoo.com ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.